# [1]ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿನ ಬಾಕಿ ವಸೂಲಿಗಾಗಿನ ಪ್ರಕ್ರಿಯೆ) ನಿಯಮಗಳು, 1994

## ವಿಷಯಾನುಕ್ರಮಣಿಕೆ


| ನಿಯಮಗಳು | | ಪುಟ ಸಂಖ್ಯೆ |
|---|---|---|
| 1. | ಹೆಸರು ಮತ್ತು ಪ್ರಾರಭ | 793 |
| 2. | ಪರಿಭಾಷೆಗಳು | 793 |
| | (1) ಅಧಿನಿಯಮ | **794** |
| | (2) ನಮೂನೆ | **794** |
| | (3) ಪ್ರಕರಣ | **794** |
| 3. | ತಗಾದೆ ನೋಟೀಸು | 794 |
| 4. | ಜಪ್ತಿ ವಾರಂಟು | 794 |
| 5. | ಕರ್ನಾಟಕ ಜಿಲ್ಲಾ ಪರಿಷತ್ತು (ಬಾಕಿ ವಸೂಲಿಗಾಗಿನ ಪ್ರಕ್ರಿಯೆ) ನಿಯಮಗಳು, 1986 | 794 |
| | ನಮೂನೆ I ಮತ್ತು II | 794 - 795 |


ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (ಕರ್ನಾಟಕ ಅಧಿನಿಯಮ 1993ರ 14) 311ನೇ ಪ್ರಕರಣದೊಂದಿಗೆ ಓದಲಾದಂತೆ ಪ್ರಕರಣ 265ರ ಉಪ-ಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಎಂದರೆ.—

**1. ಹೆಸರು ಮತ್ತು ಪ್ರಾರಂಭ.—(1) ಈ ನಿಯಮಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿನ ಬಾಕಿ ವಸೂಲಿಗಾಗಿನ ಪ್ರಕ್ರಿಯೆ) ನಿಯಮಗಳು, 1994 ಎಂದು ಕರೆಯತಕ್ಕದ್ದು.**

(2) ಅವು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.—ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.—

1. ದಿನಾಂಕ 13-12-1994ರ ಕರ್ನಾಟಕ ರಾಜ್ಯಪತ್ರ ಭಾಗ 4, 2-ಸಿ(i)ರಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ: ಗ್ರಾಅಪ 960 ಜಿಪಸ 94, ದಿನಾಂಕ 13-12-1994

(1) "ಅಧಿನಿಯಮ" ಎಂದರೆ 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ (ಕರ್ನಾಟಕ ಅಧಿನಿಯಮ 1993ರ 14);

(2) "ನಮೂನೆ" ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(3) "ಪ್ರಕರಣ" ಎಂದರೆ ಈ ಅಧಿನಿಯಮದ ಒಂದು ಪ್ರಕರಣ.

**3. ತಗಾದೆ ನೋಟೀಸು.**—265ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿನ ತಗಾದೆ ನೋಟೀಸು ನಮೂನೆ 1ರಲ್ಲಿ ಇರತಕ್ಕದ್ದು.

**4. ಜಪ್ತಿ ವಾರಂಟು.**—265ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿನ ಜಪ್ತಿ ವಾರಂಟು ನಮೂನೆ IIರಲ್ಲಿರತಕ್ಕದ್ದು.

**5. ಕರ್ನಾಟಕ ಜಿಲ್ಲಾ ಪರಿಷತ್ತು (ಬಾಕಿ ವಸೂಲಿಗಾಗಿನ ಪ್ರಕ್ರಿಯೆ) ನಿಯಮಗಳು, 1986.**—ಕರ್ನಾಟಕ ಜಿಲ್ಲಾ ಪರಿಷತ್ತು (ಬಾಕಿ ವಸೂಲಿಗಾಗಿನ ಪ್ರಕ್ರಿಯೆ) ನಿಯಮಗಳು, 1986ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

## ನಮೂನೆ I

**[3ನೇ ನಿಯಮವನ್ನು ನೋಡಿ]**

**ತಗಾದೆ ನೋಟೀಸು**

. . . . . . . . . . . . . . . . . . .ಜಿಲ್ಲಾ ಪಂಚಾಯಿತಿ/ ದಿನಾಂಕ. . . . . . . . . . . .
ತಾಲ್ಲೂಕು ಪಂಚಾಯಿತಿ

. . . . . . . . . . . . .
. . . . . . . . . . . . .
. . . . . . . . . . . . .ಗೆ,

. . . . . . . . . . . . . . . . . . . . . .ಎಂದು ನಿಮ್ಮಿಂದ ಕ್ಲೇಮು ಮಾಡಬಹುದಾದ ಈ ಕೆಳಗೆ ತೋರಿಸಿರುವಂಥ ವಿವರಗಳನ್ನುಳ್ಳ. . . . . . . . . . . . . . . . . . .ರೂಪಾಯಿಗಳ (ಅಕ್ಷರಗಳಲ್ಲಿ) . . . . . . . . . . . . . ಮೊತ್ತವು ಜಿಲ್ಲಾ ಪಂಚಾಯಿತಿಗೆ. . . . . . . . . ರಿಂದ ಬಾಕಿ ಇದೆ ಮತ್ತು ಅದು ಬಾಕಿಯಾದಂದಿನಿಂದ ಹದಿನೈದು ದಿವಸಗಳ ತರುವಾಯವೂ ಸಂದಾಯವಾಗದಿರುವುದರಿಂದ.

ಆದುದರಿಂದ ಈಗ ಈ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಹದಿನೈದು ದಿವಸಗಳೊಳಗಾಗಿ ಸದರಿ. . . . . . . . . . . . . . . . . .ರೂಪಾಯಿಗಳ (ಅಕ್ಷರಗಳಲ್ಲಿ) . . . . . . . . . . . . . .ಮೊತ್ತವನ್ನು ಸಂದಾಯ ಮಾಡಲು ಈ ಮೂಲಕ ನಿಮಗೆ ತಗಾದೆ ಮಾಡಲಾಗಿದೆ ಎಂದು ನೋಟೀಸು ಕೊಡಲಾಗಿದೆ. ಇದಕ್ಕೆ ತಪ್ಪಿದಲ್ಲಿ ಅಥವಾ ಸದರಿ ಮೊತ್ತವನ್ನು ಸದರಿ ಅವಧಿಯೊಳಗೆ ಸಂದಾಯ ಮಾಡದಿರುವುದಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮನದಟ್ಟಾಗುವಂತೆ ಸಾಕಷ್ಟು ಕಾರಣವನ್ನು ಕೊಡಲು ನೀವು ತಪ್ಪಿದರೆ ಸದರಿ ಮೊತ್ತವನ್ನು ಅದರ ಖರ್ಚುಗಳೊಂದಿಗೆ ವಸೂಲ್ಮಾಡುವುದಕ್ಕೆ ಜಪ್ತಿ ವಾರಂಟನ್ನು ಹೊರಡಿಸಲಾಗುತ್ತದೆ.

ಬಾಕಿಯಾದ ಮೊತ್ತದ ವಿವರಗಳು. . . . . . . . . . . . . . . . . ದ . . . . . . . . . . . . .
ದಿವಸದಂದು ನನ್ನ ರುಜು ಮತ್ತು ಮೊಹರಿನಡಿಯಲ್ಲಿ ಕೊಡಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಅಧಿಕೃತಗೊಳಿಸಿದ ಅಧಿಕಾರಿ.

---

## ನಮೂನೆ II

[4ನೇ ನಿಯಮವನ್ನು ನೋಡಿ]

**ಜಪ್ತಿ ವಾರಂಟು**

. . . . . . . . . . . . . . . . . . . .ಜಿಲ್ಲಾ ಪಂಚಾಯಿತಿ/ ದಿನಾಂಕ. . . . . . . . . . . .
ತಾಲ್ಲೂಕು ಪಂಚಾಯಿತಿ

ಗೆ,

. . . . . . . . . . . . . . . . . .
. . . . . . . . . . . . . .
. . . . . . . . . . . . . .

ಶ್ರೀ. . . . . . . . . .ಅವರಿಂದ. . . . . . . . . . . . ರೂಪಾಯಿಗಳು (ಅಕ್ಷರಗಳಲ್ಲಿ). . . . . . . . ಮೊತ್ತವು ಬಾಕಿ ಇದೆ ಮತ್ತು ಅದನ್ನು ಸಂದಾಯ ಮಾಡಿಲ್ಲ ಮತ್ತು . . . . . . . . . . . . .ರಂದು ತಗಾದೆ ನೋಟೀಸನ್ನು ಜಾರಿ ಮಾಡಿದ್ದಾಗ್ಯೂ ಅದನ್ನು ಸಂದಾಯ ಮಾಡಿರುವುದಕ್ಕಾಗಿ ಸಾಕಷ್ಟು ಕಾರಣವನ್ನು ತೋರಿಸದೆ ಇರುವುದರಿಂದ ಮತ್ತು ಆ ನೋಟೀಸನ್ನು ಅವನ ಮೇಲೆ ಜಾರಿಗೊಳಿಸಿದಂದಿನಿಂದ 15 ದಿವಸಗಳು ಗತಿಸಿಹೋಗಿರುವುದರಿಂದ,

ಆದುದರಿಂದ ಅಧಿನಿಯಮದ 265ನೇ ಪ್ರಕರಣದ (3)ನೇ ಉಪ-ಪ್ರಕರಣದ ಅನುಸರಣೆಯಲ್ಲಿ ಕಾನೂನಿನ ಮೂಲಕ ವಿನಾಯಿತಿಗೊಂಡ ವಸ್ತುಗಳನ್ನು ಹೊರತುಪಡಿಸಿ ಸದರಿ ಬಾಕಿದಾರನಾದ ಶ್ರೀ. . . . . . . . . . . . . . . . . . . . . . . . . . . .ಅವರ ಚರ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಕಾನೂನಿಗನುಸಾರವಾಗಿ ಸದರಿ ಚರ ಸ್ವತ್ತನ್ನು ಮಾರಾಟ ಮಾಡಲು ಮತ್ತು ಮಾರಾಟದಿಂದ ಬಂದ . . . . . . . . . . . . .ಹಣವನ್ನು . . . . . . . . . . . . .ಜಿಲ್ಲಾ ಪರಿಷತ್ತಿನಲ್ಲಿ ಠೇವಣಿ ಇಡಲು ನಿಮಗೆ ಈ ಮೂಲಕ ಅಧಿಕೃತಗೊಳಿಸಲಾಗಿದೆ.

. . . . . . . . . . . . . .ದಿನಾಂಕದಂದು ನನ್ನ ರುಜು ಮತ್ತು ಮೊಹರಿನೊಡನೆ ಕೊಡಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಅಧಿಕೃತ ಅಧಿಕಾರಿ.

---